# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**
ತಿನ್ನುವ ಅನ್ನದ ಮೇಲೆ ಅಹಂಕಾರ ಪಟ್ಟರೆ.
ರೋಗ ರುಜಿನದಿಂದ ಬಳಲುತ್ತಾನೆ..
ಹೆಣ್ಣನ್ನು ತಿರಸ್ಕಾರ ಭಾವದಿಂದ ನೋಡಿದರೆ
ಬ್ರಹ್ಮಚಾರಿಯಾಗಿಯೇ ಉಳಿಯುತ್ತಾನೆ..
ಒದಗಿ ಬಂದ ಸಂಪತ್ತನ್ನು ಕಡೆಗಣಿಸಿದರೆ
ದರಿದ್ರನಾಗಿಯೇ ಇರುತ್ತಾನೆ..
ಕಾಯಕದ ಮೇಲೆ ಪ್ರೀತಿ ತೋರದಿದ್ದರೆ
ನಿರುದ್ಯೋಗಿಯಾಗಿಯೇ ಬಾಳುತ್ತಾನೆ..
ಕುಟುಂಬ ಸಂಸಾರದಲ್ಲಿ ಒಲವು ಇಲ್ಲದಿದ್ದರೆ
ಅನಾಥನಾಗಿಯೇ ಉಳಿಯುತ್ತಾನೆ.
**ಭಗವಾನ್ ಶ್ರೀಕೃಷ್ಣ**



PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 05-12-2025 to 11-12-2025 ಬೆಲೆ:10-00 ಸಂಪುಟ–1 ಸಂಚಿಕೆ–10 ಪುಟಗಳು–6










**1984 ರಲ್ಲಿ ಎಸ್ ಆರ್ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಂ ಎನ್ ಲಕ್ಷ್ಮೀ ನಾರಾಯಣ ಹಾಗೂ ಹಿರಿಯ ನಿರ್ದೇಶಕರುಗಳು ಸೇರಿ ಕಟ್ಟಿದ ಸಂಸ್ಥೆ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ. ಕಾನ್ನಿಡ. ಮೂರು ವರ್ಷಗಳಿಂದ ಡಿಸೆಂಬರ್ 1 ರಂದು ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಸ್ಥಾಪಕ ಅಧ್ಯಕ್ಷರಾದ ಎಸ್ ಆರ್ ಪುಟ್ಟಣ್ಣ ಕಣಗಾಲರ ಹುಟ್ಟು ಹಬ್ಬವನ್ನು ನಿರ್ದೇಶಕರ ಸಂಘ ಆಚರಣೆ ಮಾಡುತ್ತಾ ಬಂದಿದೆ. ಈ ವರ್ಷ ವಿಶೇಷ ಎಂಬಂತೆ ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಚಿತ್ರರಂಗದ ಎಲ್ಲಾ ವಿಭಾಗದ ನಿರ್ಮಾಣ ಸಹಾಯಕರಿಂದ ನಿರ್ಮಾಪಕರವರೆಗೆ 35 ಜನರನ್ನು ಆಯ್ಕೆ ಮಾಡಿ ಅವರಿಗೆ ಕಾನ್ಫಿಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.**

## ರೂಪಾಯಿಗೆ ಜಗತ್ತಿನಲ್ಲಿ ಯಾವುದೇ ಮೌಲ್ಯವಿಲ್ಲ –ಖರ್ಗೆ



**ನವದೆಹಲಿ:** ಡಾಲರ್ ಎದುರು ಭಾರತೀಯ ರೂಪಾಯಿಯ ಮೌಲ್ಯ ಸಾರ್ವಕಾಲಿಕ ಕುಸಿತ ಕಂಡಿದ್ದು, ಜಗತ್ತಿನಲ್ಲಿ ಭಾರತ ರೂಪಾಯಿಗೆ ಯಾವುದೇ ಮೌಲ್ಯ ಇಲ್ಲದಂತಾಗಿದೆ ಎಂದು ರಾಜ್ಯಸಭಾ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ. ಸರ್ಕಾರದ ನೀತಿಗಳು ರೂಪಾಯಿಯನ್ನು ದುರ್ಬಲಗೊಳಿಸಿವೆ. ಭಾರತದ ರೂಪಾಯಿಗಳು ಜಗತ್ತಿನಲ್ಲಿ ಯಾವುದೇ ಮೌಲ್ಯ ಹೊಂದಿಲ್ಲ ಎಂದು ದೂರಿದ್ದಾರೆ. ಇವರ ನೀತಿಗಳಿಂದಾಗಿ ರೂಪಾಯಿ ಮೌಲ್ಯ ಕುಸಿತ ಕಂಡಿದೆ. ಅವರ **3ನೇ ಪುಟಕ್ಕೆ**

## ದೆಹಲಿ ನಾಯಕರ ಮನೆ ಕದತಟ್ಟಿದ ಬಿಜೆಪಿ ಭಿನ್ನರು..?

**ನವದೆಹಲಿ:** ಒಂದು ಕಡೆ ರಾಜ್ಯ ಕಾಂಗ್ರೆಸಿನಲ್ಲಿ ಅಧಿಕಾರ ಹಂಚಿಕೆಯ ಕಸರತ್ತು ನಡೆಯುತ್ತಿದ್ದರೆ, ಇನ್ನೊಂದೆಡೆ ರಾಜ್ಯ ಬಿಜೆಪಿಯಲ್ಲಿ ಅಧಿಕಾರ ಇಲ್ಲದೆ ಕಸರತ್ತು ಭರ್ಜರಿಯಾಗಿಯೇ ನಡೆಯುತ್ತಿದೆ. ರಾಜ್ಯ ಸರಕಾರ ಅಧಿಕಾರ ಹಂಚಿಕೆಯ ಗದ್ದಲದಲ್ಲಿ ಬಿಝಿ ಇದ್ದು ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎನ್ನುವ ದೂರು ಜನಸಾಮಾನ್ಯರದ್ದಾದರೂ ವಿರೋಧ ಪಕ್ಷದ ನಾಯಕರು ತಮ್ಮ ಪಾಡಿಗೆ ತಾವು ಆರಾಮ ಮೂಡಿನಲ್ಲಿದ್ದಾರೆ ಎನ್ನುವುದು ಜನಸಾಮನ್ಯರ ಮಾತು. ಈ ನಡುವೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ. ವೈ. ವಿಜಯೇಂದ್ರ ವಿರುದ್ಧ ಸಮರ ಸಾರಿದ್ದ ಭಿನ್ನಮತೀಯ ನಾಯಕರು ದೆಹಲಿಯ ನಾಯಕರ ಮನೆ ಕದ ತಟ್ಟಿದ್ದಾರೆ. ವಿಜಯೇಂದ್ರ ಅವರನ್ನು ಕೂಡಲೇ ಅಧ್ಯಕ್ಷ ಸ್ಥಾನದಿಂದ ಬದಲಾಯಿಸುವ ಒತ್ತಡದ ಬದಲು, ಮುಂಬರುವ ವಿಧಾನಸಭೆ ಚುನಾವಣೆಗೆ ಅವರು ಪಕ್ಷದ ನಾಯಕತ್ವ **3ನೇ ಪುಟಕ್ಕೆ**



## ಅಗತ್ಯ ಬಿದ್ದರೆ ನಮ್ಮ ಮನೆಯಲ್ಲೂ ಬ್ರೇಕ್‌ಫಾಸ್ಟ್ –ಪರಮೇಶ್ವರ್

**ಬೆಂಗಳೂರು:** ಅಗತ್ಯ ಬಿದ್ದರೆ ನಮ್ಮ ಮನೆಗೂ ಬ್ರೇಕ್ ಫಾಸ್ಟ್‌ಗೆ ಕರೆಯುತ್ತೇನೆ ಎಂದು ಗೃಹ ಸಚಿವ ಜಿ ಪರಮೇಶ್ವರ್ ತಿಳಿಸಿದ್ದಾರೆ. ಸದಾಶಿವನಗರ ನಿವಾಸದಲ್ಲಿ ಮಾತನಾಡಿದ ಅವರು, ಪಕ್ಷದಲ್ಲಿ ಎಲ್ಲವೂ ತಿಳಿಯಾಗಿದೆ. ಈಗ ಸಂತೋಷದ ವಾತಾವರಣವಿದೆ. ಸಿಎಂ–ಡಿಸಿಎಂ ಎರಡನೇ ಬ್ರೇಕ್ ಫಾಸ್ಟ್‌ಗೂ ನನ್ನನ್ನು ಕರೆದಿಲ್ಲ. ಸದ್ಯಕ್ಕೆ ಅವರು ಇಬ್ಬರೇ ತಿಂಡಿ ತಿನ್ನುತ್ತಿದ್ದಾರೆ. ನಮ್ಮನ್ನೂ ಕರೆದರೆ ನಾವೂ ತಿಂಡಿ ತಿನ್ನಲು ಹೋಗುತ್ತೇವೆ. ಅಗತ್ಯ ಬಿದ್ದರೆ ನಮ್ಮ ಮನೆಗೂ ಬ್ರೇಕ್ ಫಾಸ್ಟ್‌ಗೆ ಕರೆಯುತ್ತೇನೆ. ಸಿಎಂ–ಡಿಸಿಎಂ ಇಬ್ಬರನ್ನೂ **3ನೇ ಪುಟಕ್ಕೆ**










ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಕಾನ್ಫಿಡದಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ..



1984 ರಲ್ಲಿ ಎಸ್ ಆರ್ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಂ ಎನ್ ಲಕ್ಷ್ಮೀ ನಾರಾಯಣ ಹಾಗೂ ಹಿರಿಯ ನಿರ್ದೇಶಕರುಗಳು ಸೇರಿ ಕಟ್ಟಿದ ಸಂಸ್ಥೆ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ. ಕಾನ್ಫಿಡ. ಈಗ ಇದೆ ಸಂಘದಡಿಯಲ್ಲಿ ಮೂರು ವರ್ಷಗಳಿಂದ ಡಿಸೆಂಬರ್ ಒಂದರಂದು ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ವತಿಯಿಂದ ಸಂಘದ ಸ್ಥಾಪಕ ಅಧ್ಯಕ್ಷರಾದ ಭಾರತೀಯ ಚಿತ್ರರಂಗದ ದಿಗ್ಗಜರು ಎಸ್ ಆರ್ ಪುಟ್ಟಣ್ಣ ಕಣಗಾಲರ ಹುಟ್ಟು ಹಬ್ಬವನ್ನು ನಿರ್ದೇಶಕರ ಸಂಘ ಆಚರಣೆ ಮಾಡುತ್ತಾ ಬಂದಿದೆ. ಅಂದು ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಈ ವರ್ಷವೂ ಕೂಡ ಪುಟ್ಟಣ್ಣ ಕಣಗಾಲರ ಜನ್ಮದಿನ ಆಚರಿಸುವುದರೊಂದಿಗೆ ಈ ವರ್ಷ ವಿಶೇಷ ಎಂಬಂತೆ ಸಂಘದ ಈಗಿನ ಅಧ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ ಒಂದರಂದು ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಚಿತ್ರರಂಗದ ಎಲ್ಲಾ ವಿಭಾಗದಿಂದ ಹಿರಿಯ ಕಾರ್ಮಿಕರು, ಕಲಾವಿದರು, ತಂತ್ರಜ್ಞರು, ನಿರ್ದೇಶಕರು, ನಿರ್ಮಾಪಕರುಗಳ ವಲಯ ದಿಂದ ಎಲ್ಲಾ ವಿಭಾಗಳಿಂದಲೂ ಅಂದರೆ ನಿರ್ಮಾಣ ಸಹಾಯಕರಿಂದ ನಿರ್ಮಾಪಕರವರೆಗೆ 35 ಜನರನ್ನು ಆಯ್ಕೆ ಮಾಡಿ ಅವರಿಗೆ ಕಾನ್ಫಿಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯ ಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ ವಿ ಪ್ರಭಾಕರ್, ಇಸ್ರೋದ ವಿಶಿಷ್ಟ ವಿಜ್ಞಾನಿ ರಾಮನಗೌಡ ವೆಂಕನಗೌಡ ನಾಡಗೌಡರು, ಹಿರಿಯ ಚಲನಚಿತ್ರ ನಿರ್ದೇಶಕರಾದ ಓಂ ಶ್ರೀ ಸಾಯಿಪ್ರಕಾಶ್, ಕಲಾವಿದರಾದ ಹಿರಿಯ ನಟ ಶ್ರೀಧರ್, ಸುಂದರ್ ರಾಜ್, ಶಿವಕುಮಾರ್, ಅನಿರುದ್ಧ ಜತಕರ್, ಶ್ರೀಮತಿ ಶ್ರೀರಕ್ಷಾ ಶಿವಕುಮಾರ್, ಶ್ರೀಮತಿ ಪ್ರಮೀಳಾ ಜೋಷಾಯ್, ಪುಟ್ಟಣ್ಣನವರ ಶಿಷ್ಯರಾದ ಚಂದ್ರಹಾಸ ಆಳ್ವ, ಶ್ರೀಮತಿ ಡಾ ಪುಣ್ಯವತಿ, ಡಾ. ಬಿ ಎಮ್ ಉಮೇಶ್ ಕುಮಾರ್, ಕೃಷ್ಣೇ ಗೌಡ, ಗುರುರಾಜ್ ಮತ್ತು ಪುಟ್ಟಣ್ಣ ಕಣ ಗಾಲ್ ರವರ ಮಕ್ಕಳಾದ ಭುವನೇಶ್ವರಿ ಮತ್ತು ತ್ರಿವೇಣಿಯವರು ಹಾಗೂ ಚಿತ್ರರಂಗದ ಮಹ ನೀಯರು, ಹಿರಿಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಂಘದ ಅಧ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್, ಉಪಾಧ್ಯಕ್ಷರಾದ, ಜೋ ಸೈಮನ್, ಜಗದೀಶ್ ಕೊಪ್ಪ, ಕಾರ್ಯದರ್ಶಿಗಳಾದ ಟಾಪ್ ಸ್ಟಾರ್ ರೇಣುಕುಮಾರ್, ಜಂಟಿ ಕಾರ್ಯದರ್ಶಿ ಗಳಾದ ಮಳವಳ್ಳಿ ಸಾಯಿಕೃಷ್ಣ, ಖಜಾಂಚಿ ಗಳಾದ ಆದಿತ್ಯ ಚಿಕ್ಕಣ್ಣ ಹಾಗೂ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಉಪಸಮಿತಿ ಸದಸ್ಯರು ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದರು. ಕಾನ್ಫಿಡ ರಾಜ್ಯೋತ್ಸವ ಪ್ರಸಸ್ತಿ ವಿಜೇತರು ಉಡುಪಿ ಕೃಷ್ಣ ನಿರ್ಮಾಣ ಸಹಾಯಕ, ರಾಜಣ್ಣ ಲೈಟ್ ಬಾಯ್ಸ್, ಮಹಾಬಲ ವಾಹನ ಚಾಲಕ, ಎ ಎಚ್ ಭಟ್ ಚಿತ್ರೀಕರಣ ಘಟಕ ಮಾಲೀಕರು, ಕೆ ಸಿ ನಾಗರಾಜ್, ವಸ್ತ್ರಾಲಂಕಾರರು, ಎನ್ ಕೆ ರಾಮಕೃಷ್ಣ ವರ್ಣಾಲಂಕಾರರು, ಜಿ ನಾಗೇಶ್ವರ ರಾವ್ಕೇ ಶಾಲಂಕಾರರು ರವೀಂದ್ರನಾಥ ಕೆ ಎಸ್ ಕಂಠದಾನ






ಕಲಾವಿದರು, ರಾಮಣ್ಣ ಎನ್ ಎಲ್ ನಿರ್ಮಾಣ ನಿರ್ವಾಹಕ, ಅಶ್ವಥ್ ನಾರಾಯಣ್ ಸ್ಥಿರ ಚಿತ್ರ ಛಾಯಾಗ್ರಹಕ, ಮಹೇಂದ್ರ ಧ್ವನಿ ಮುದ್ರಣಕಾರರು, ಶಂಕರ್ ಎಫೆಕ್ಟ್ ಇಂಜಿನಿಯರ್, ಗಂಗಾಧರ್ ಸೋಮ್ ಪ್ರಚಾರ ಕಲೆ, ಸುಧೀಂದ್ರ ವೆಂಕಟೇಶ್ ಪತ್ರಿಕಾ ಸಂಪರ್ಕ ಪತ್ರಕರ್ತರು, ದತ್ತಣ್ಣ ಹಿರಿಯ ಚಲನಚಿತ್ರ ಕಲಾವಿದರು, ಶ್ರೀಮತಿ ಎಂ ಎನ್ ಲಕ್ಷ್ಮೀದೇವಿ ಹಿರಿಯ ಚಲನಚಿತ್ರ ಕಲಾವಿದರು, ರಮಣ ಕಣಗಾಲ್ ಸಹಾಯಕ ನಿರ್ದೇಶಕರು, ರಘುನಂದನ್ ಬಿ ಸಹ ನಿರ್ದೇಶಕರು, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶಕರು, ಬಾಬು ಖಾನ್ ಕಲೆ, ವಿಜಯರಾಮ್ ನೃತ್ಯ, ಎಂ ಎನ್ ಸ್ವಾಮಿ ಸಂಕಲನಕಾರರು, ಶ್ರೀಮತಿ ಬಿ ಕೆ ಸುಮಿತ್ರ ಹಿನ್ನೆಲೆ ಗಾಯಕರು, ಮೈಸೂರು ಮೋಹನ್ ಸಂಗೀತ, ಕೆ ವಾಸುದೇವ ಛಾಯಾಗ್ರಹಕರು ಟಿ ಎ ಶ್ರೀನಿವಾಸ್ ಪ್ರಾದೇಶಿಕ ಚಲನಚಿತ್ರ ಕಾರರು, ಸುಂದರೇಶ್ ಬಿ ಕೆ ಮತ್ತು ಆದಿತ್ಯ ಚಿಕ್ಕಣ್ಣ ಅಭಿಮಾನದ ಸೇವೆಗಾಗಿ, ಕೆ ವಿ ಚಂದ್ರಶೇಖರ್ ಚಲನಚಿತ್ರ ಪ್ರದರ್ಶಕರು, ನಾರಾಯಣ ರೆಡ್ಡಿ ಚಲನಚಿತ್ರ ವಿತರಕರು, ಎಸ್ ಎ ಶ್ರೀನಿವಾಸ್ ನಿರ್ಮಾಪಕರು, ನಂಜರಾಜೇ ಅರಸ್, ನಿರ್ದೇಶಕರು ಇವರುಗಳಿಗೆ ನೀಡಲಾಗಿದೆ.







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021